# ಸಂಪಿಗೆ ಮರಕ್ಕೆ ಬೆಂಕಿ

ಹೊರಡುವ ಮೊದಲು ತನ್ನ ಹುಡುಗಿ ಋತುವಿನತ್ತ ನೋಡಿದ. ಇಬ್ಬರ ನೋಟಗಳೂ ಬೆರೆತವು. ಕಂಗಳಲ್ಲೇ ಹೋಗಿ ಬರುತ್ತೇನೆಂದು ಹೇಳಿದಾಗ ಅವಳು ತಲೆಯಾಡಿಸಿದಳು.

ಹೇಮಂತನ ಬೈಕು ಕೋಟೆ ಬಂಗಲೆಯಿಂದ ಹೊರಗೋಡಿತು. ಬಂಗಲೆ ಬರಿದಾದಂತೆನಿಸಿತು ಋತುವಿಗೆ. ಹೇಮಂತನ ಸಾಮಿಪ್ಯ, ಅವನ ಸ್ಪರ್ಶ, ಎಲ್ಲಕ್ಕಿಂತ ಹೆಚ್ಚಾಗಿ ಅವನ ಆತ್ಮೀಯವಾದ ಪ್ರೇಮಭರಿತ ಮಾತುಗಳು ಅವಳನ್ನು ಭ್ರಮಿತಳನ್ನಾಗಿ ಮಾಡಿದ್ದವು. ತಾಯಿಯ ಪ್ರೀತಿಯಿಂದ ವಂಚಿತಳಾದ ಹುಡುಗಿಗೆ ಹೇಮಂತನ ಜೊತೆಗಿನ ಒಡನಾಟ ಹೊಸ ಅನುಭವಗಳನ್ನು ಕೊಡತೊಡಗಿತ್ತು.

‘ಚುರುಕು ಹುಡುಗ, ನಂಗೆ ತುಂಬಾ ಹಿಡಿಸ್ಬಿಟ್ಟ...’ ಪುರುಷೋತ್ತಮರೆಂದಾಗ ಋತುವಿಗೆ ನೆಮ್ಮದಿಯಾದರೂ ಟೆರೇಸಿನಲ್ಲಿ ತಮ್ಮನ್ನು ಹಿಂಬಾಲಿಸಿ ಬಂದ ವ್ಯಕ್ತಿಯ ನೆನಪಾಗಿ ಮನಸ್ಸು ಕಹಿಯಾಯಿತು.

* * *

